

# ಪ್ರೇಮಕ್ಕೂ ಬೀಗ

ಜಗತ್ತಿನ ಎಲ್ಲ ನದಿಗಳಿಗೂ ಅದರದ್ದೇ ಆದ ಕಥೆಗಳಿವೆ. ಆಸ್ಟ್ರಿಯಾದ ಮುರ್ ನದಿಗೂ, ಪ್ರೇಮಿಗಳಿಗೂ ವಿಚಿತ್ರ ನಂಟು!

★ ಮೂಡ್ನಾಕೂಡು ಚಿನ್ನಸ್ವಾಮಿ

ಯೂರೋಪಿನ ಅನೇಕ ಪಟ್ಟಣಗಳು ಸಮುದ್ರ ಅಥವಾ ನದಿ ತಟದಲ್ಲಿ ಕಟ್ಟಿರುವ ಆಕರ್ಷಕ ವಾಸ್ತು ವಿನ್ಯಾಸವುಳ್ಳ ನಗರಗಳು. ಅಲ್ಲಿನ ಯಾವುದೇ ಸಣ್ಣ ಪುಟ್ಟ ನಗರಗಳ ದರ್ಶನವೂ ಅಲ್ಲಿನ ಸ್ಥಳೀಯ ಸರ್ಕಾರದ ಆಡಳಿತ ವ್ಯವಸ್ಥೆಯ ದಕ್ಷತೆಯನ್ನು ಒತ್ತಿ ಹೇಳುತ್ತದೆ. ನಾನು ಇತ್ತೀಚೆಗೆ ಭೇಟಿ ನೀಡಿದ ಗ್ರಾಜ್ ಅಂತಹ ಒಂದು ಸುಂದರ ನಗರ. ಅದು ಆಸ್ಟ್ರಿಯಾ ದೇಶದ ಎರಡನೇ ಅತಿ ದೊಡ್ಡ ನಗರ. ವಿಶ್ವವಿದ್ಯಾಲಯಗಳಿಂದ ತುಂಬಿದ ಊರು. ಸುಮಾರು 150 ದೇಶಗಳಿಂದ ಬಂದಿರುವ ಸಾವಿರಾರು ವಿದ್ಯಾರ್ಥಿಗಳು ಅಲ್ಲಿ ವ್ಯಾಸಂಗ ನಿರತರಾಗಿದ್ದಾರೆ. ಆಸ್ಟ್ರಿಯಾದ ಸಾಂಸ್ಕೃತಿಕ ನಗರಿ ಎಂದೂ ಗ್ರಾಜ್ ಹೆಸರು ಗಳಿಸಿದೆ.

ಈ ನಗರದ ಮಧ್ಯಭಾಗದಲ್ಲಿ ಮುರ್ ನದಿ ಹರಿದು ಹೋಗುತ್ತದೆ. ಯೂರೋಪಿನಲ್ಲೇ ಅತ್ಯಂತ ರಭಸವಾಗಿ ಹರಿಯುವ ನದಿ ಎಂದು ಮುರ್ ಹೆಸರು ಮಾಡಿದೆ. ಆಲ್ಪ್ಸ್ ಪರ್ವತದಲ್ಲಿ ಹುಟ್ಟಿ ಸ್ಲೊವೇನಿಯಾ, ಹಂಗೆರಿ ದೇಶಗಳನ್ನು ಹಾದು ಬರುವ ಈ ನದಿಯ ಆಳ ಮತ್ತು ರಭಸ ಎಷ್ಟಿತ್ತೆಂದರೆ ಹಿಂದೆ ಆ ರಭಸದ ನೀರಿನಲ್ಲೇ ಮರದ ದಿಮ್ಮಿಗಳನ್ನು ತೇಲಿಬಿಟ್ಟು ಸಾಗಿಸುತ್ತಿದ್ದರಂತೆ! ಈ ನದಿ ಗ್ರಾಜ್ ನಗರದ ಮಧ್ಯಭಾಗದಲ್ಲಿ ಹರಿದು ಬೈತಲೆ ಕ್ರಾಪಿನಂತೆ ತೆರೆದುಕೊಳ್ಳುತ್ತದೆ. ನದಿಯ ಇಕ್ಕೆಲದಲ್ಲಿ ಸುಂದರ ನಗರ ಹರಡಿಕೊಂಡಿದೆ. ಎರಡೂ ಬದಿಯನ್ನು ಕೂಡಿಸಲು ನಗರದ ಉದ್ದಕ್ಕೂ ಅಲ್ಲಲ್ಲಿ ಸೇತುವೆಗಳಿದ್ದು ಸೇತುವೆಗೆ ಉಕ್ಕಿನ ಸರಪಳಿಯಿಂದಾದ ತಡೆಗೋಡೆಗಳಿವೆ.

ಮುರ್ ನದಿಯ ಸೇತುವೆಗಳು ಬೇರೆ ದೇಶಗಳ, ನದಿಗಳ ಸೇತುವೆಗಳಂತಲ್ಲ. ಅದೇ ಅಲ್ಲಿನ ವೈಚಿತ್ರ್ಯ. ಅವು ಪ್ರೇಮಿಗಳಿಗೆ ರಕ್ಷಕರಾಗಿ ನಿಲ್ಲಬಲ್ಲವು. ಅಭಯ ಹಸ್ತ ನೀಡಬಲ್ಲವು. ಪಾಶ್ಚಾತ್ಯರು ಪ್ರೇಮದ ವಿಷಯದಲ್ಲಿ ಕನಿಷ್ಠರು ಎಂದೇ ನಮ್ಮ ಕಲ್ಪನೆ. 'ಅವರ ತಲೆಯಿಂದ ಹ್ಯಾಟು ಕೆಳಗೆ ಬಿದ್ದರೆ ಸಾಕು ಪ್ರೇಮಿಗೆ ಬೈ ಬೈ ಹೇಳುತ್ತಾರೆ. ಹೃದಯ ಸಂಬಂಧಕ್ಕೆ ಅವರಲ್ಲಿ ಅಷ್ಟೇನು ಮಹತ್ವವಿಲ್ಲ' ಎಂದೆಲ್ಲ ಹರಟುತ್ತೇವೆ.

ಆದರೆ ಗ್ರಾಜ್ ನಗರದಲ್ಲಿ ಮುರ್ ನದಿಯ ಸೇತುವೆ ಮೇಲೆ ನಿಂತು ನೋಡಿದರೆ ಹಾಗನಿಸುವುದಿಲ್ಲ. ಆ ಉಕ್ಕಿನ ಸರಪಳಿಯ ತಡೆಗೋಡೆಗಳ ತುಂಬಾ ಸಣ್ಣ, ದೊಡ್ಡ ಬೀಗಗಳು ನೇತಾಡುತ್ತವೆ. ಅವು ಪ್ರೇಮಿಗಳು ಹಾಕಿದ ಬೀಗಗಳಂತೆ. ಅದು ಯಾತಕ್ಕೆಂದು ತಿಳಿದಾಗ ಸಖೇದಾಶ್ಚರ್ಯವಾಯಿತು. ಪ್ರೇಮಿಗಳು ತಮ್ಮ ಪ್ರೇಮ ಜೀವನಪೂರ್ತಿ ಭದ್ರವಾಗಿರಲೆಂದು ಹಾಕಿದ ಬೀಗಗಳು ಅವು. 'ಇವರದ್ದು ಅಸಲಿ ಪ್ರೇಮವಲ್ಲ, ನಕಲಿ ಪ್ರೀತಿ' ಎನ್ನಲು ಸಾಧ್ಯವೆ?

ದೂರದ ಊರುಗಳಿಂದ ಅಲ್ಲಿಗೆ ಬರುವ ಪ್ರೇಮಿಗಳು ಜತೆಗೊಂದು ಬೀಗವನ್ನೂ ತರುತ್ತಾರೆ. ತಮ್ಮ ಪ್ರೀತಿ ಶಾಶ್ವತವಾಗಿರಲಿ ಎಂದು ಪ್ರಾರ್ಥಿಸಿ ತಡೆಗೋಡೆಯ ಸರಪಳಿಗೆ ಬೀಗ ಹಾಕಿ, ಬೀಗದ ಕೀಲಿಕೈಯನ್ನು ಮುರ್ ನದಿಗೆ ಎಸೆದು ಬಿಡುತ್ತಾರೆ! ಅಷ್ಟು ರಭಸವಾಗಿ ಹರಿಯುವ ನದಿಯು ಕೀಯನ್ನೂ ಸ್ವರ್ಗಕ್ಕೆ ಒಯ್ದು ಸುರಕ್ಷಿತವಾಗಿ ಇಟ್ಟುಕೊಳ್ಳುತ್ತದೆ ಎಂಬ ನಂಬಿಕೆಯಿರಬೇಕು!

ಪ್ರೇಮಿಗಳಷ್ಟೇ ಅಲ್ಲ, ಹೊಸದಾಗಿ ಮದುವೆಯಾದ ದಂಪತಿಗಳೂ ಹಾಗೆ ಮಾಡುತ್ತಾರೆ ಎಂದು ಗೊತ್ತಾಯಿತು. ಪ್ರೀತಿಯ ಅದಮ್ಯ ಬಯಕೆಯೆಂದರೆ ಉಳಿಯುವುದು, ನೆಲೆ ಕಂಡುಕೊಳ್ಳುವುದೇ ಅಲ್ಲವೆ? ಜಗತ್ತಿನಾದ್ಯಂತ ಮಾನವನ ಮೂಲ ತುಡಿತ ಒಂದೇ ಆದರೂ ವಾಡಿಕೆಯಿಂದ ಸ್ವಲ್ಪ ಬದಲಾವಣೆ ಕಾಣಿಸಿಕೊಳ್ಳುತ್ತದೆ ಅನಿಸುತ್ತದೆ. ಗ್ರಾಜ್ ನಗರದ ಆಕರ್ಷಣೆ ಮುರ್ ನದಿ ಅಷ್ಟೇ ಅಲ್ಲ, ಹಾಲಿವುಡ್‌ನ ಜನಪ್ರಿಯ ನಟ ಅರ್ನಾಲ್ಡ್ ಸ್ವಾರ್ಜ್‌ನೆಗರ್‌ನ ಮನೆ ಮತ್ತು ಅವನು ಬೀರ್ ಚಪ್ಪರಿಸುತ್ತಿದ್ದ ಪಬ್ ಕೂಡಾ ಅಲ್ಲಿದೆ. ಇಲ್ಲಿಗೆ ಬಂದ ಜನರ ಅದನ್ನೂ ನೋಡುತ್ತಾರೆ. ■